ಬಾಲಿವುಡ್

# ಹೃತಿಕ್ ಬರ್ತ್‌ಡೇ




ಹೃತಿಕ್ ರೋಶನ್ ಕಳೆದ ವಾರ 40ಕ್ಕೆ ಕಾಲಿಟ್ಟ. 13 ವರ್ಷಗಳ ಹಿಂದೆ 'ಕಹೋ ನ ಪ್ಯಾರ್ ಹೈ' ಚಿತ್ರದ ಮೂಲಕ ಬಾಲಿವುಡ್‌ಗೆ ಕಾಲಿಟ್ಟ ಹೃತಿಕ್ ತನ್ನದೇ ಆದ ಅಭಿಮಾನಿಗಳನ್ನು ಸೃಷ್ಟಿಸುವಲ್ಲಿ ಸಫಲನಾಗಿದ್ದಾನೆ. ಪ್ರತಿಯೊಂದು ಚಿತ್ರದಲ್ಲೂ ವಿಭಿನ್ನ ಪಾತ್ರಗಳನ್ನು ಪೋಷಿಸುವ ಹೃತಿಕ್, ತನ್ನ ಕುಣಿತದಿಂದಲೇ ಪ್ರೇಕ್ಷಕರನ್ನು ಥಿಯೇಟರ್‌ಗೆ ಸೆಳೆಯುವ ಸಾಮರ್ಥ್ಯ ಉಳ್ಳವನು. ಬಿಗ್ ಬಜೆಟ್ ಚಿತ್ರಗಳ ಈ ಹೀರೊ, ಜನಪ್ರಿಯತೆಯಲ್ಲಿ ತನ್ನ ತಂದೆಯನ್ನೂ ಮೀರಿಸಿ ಮುನ್ನಡೆದಿರುವುದು ಸಹಜವೇ. ಜೆಂಟಲ್‌ಮ್ಯಾನ್ ಗುಣಗಳ ಹೃತಿಕ್ ಕುಟುಂಬದ ಜತೆಗೇ ಹೆಚ್ಚು ಕಾಲ ಕಳೆಯುವುದರಿಂದ ಆತನ ಬಗ್ಗೆ ಗಾಸಿಪ್‌ಗಳೂ ಕಡಿಮೆಯೇ.

ತನ್ನ ಹುಟ್ಟುಹಬ್ಬವನ್ನು ಹೃತಿಕ್ ಸಮುದ್ರದ ನಡುವೆ ಹಾಯಿ ಹಡಗೊಂದರ ಪಾರ್ಟಿಯಲ್ಲಿ ಆಚರಿಸಿಕೊಂಡನಂತೆ. ಪತ್ನಿ ಸುಸೇನ್ ಅಲ್ಲದೆ ನಿಕಟ ಸ್ನೇಹಿತರಾದ ಪ್ರೀತಿ ಜಿಂಟಾ, ಚಂಕಿ ಪಾಂಡೆ, ಅರ್ಜುನ್ ರಾಂಪಾಲ್ ಮುಂತಾದವರು ಈ ಪಾರ್ಟಿಯಲ್ಲಿ ಇದ್ದರಂತೆ. ಗೆಳೆಯರ ಜತೆಗೆ ಮೋಜು ಮಸ್ತಿ ಮಾಡುವುದರಲ್ಲಿ ಹೃತಿಕ್ ಯಾವತ್ತೂ ಹಿಂದೆ ಬಿದ್ದಿಲ್ಲ. ಹಾಗಾಗಿಯೇ ಆತನ ಹಳೆಯ ಗೆಳೆಯ– ಗೆಳತಿಯರ ಪಟ್ಟಿಯಲ್ಲಿ ಬದಲಾವಣೆಯೂ ಆಗಿಲ್ಲ. ಪ್ರತಿ ತಿಂಗಳೂ ಗೆಳೆಯರೊಂದಿಗೆ ಜಗಳವಾಡುವ ಶಾರೂಕ್ ಖಾನ್ ಈ ಹೃತಿಕ್‌ನಿಂದ ಕಲಿಯಬೇಕಾದದ್ದು ಸಾಕಷ್ಟಿದೆ ಎಂದು ಅರ್ಜುನ್ ರಾಂಪಾಲ್ ಹೇಳಿದನಂತೆ. ನಿಕಟ ಗೆಳೆಯನಾಗಿದ್ದ ಅರ್ಜುನ್ ಜತೆಗೆ ಶಾರೂಕ್ ಖಾನ್ ಇತ್ತೀಚೆಗೆ ಸರಿಯಾಗಿ ಮುಖ ಕೊಟ್ಟು ಮಾತನಾಡದಿರುವುದೇ ಇದಕ್ಕೆ ಕಾರಣ. ಅಂದ ಹಾಗೆ ಅರ್ಜುನ್ ರಾಂಪಾಲ್ ಇತ್ತೀಚೆಗೆ ಸಲ್ಮಾನ್ ಖಾನ್ ಜತೆಗೆ ಸಿನಿಮಾವೊಂದರಲ್ಲಿ ನಟಿಸುತ್ತಿರುವುದು ಶಾರೂಕ್‌ನ ಬಿಗುಮಾನಕ್ಕೆ ಕಾರಣವಂತೆ.



# ಲೇಡಿ ಜರ್ನಲಿಸ್ಟ್

ಇತ್ತೀಚೆಗೆ ಬಾಲಿವುಡ್‌ನಲ್ಲಿ ಹೀರೋಯಿನ್‌ಗಳು ಒಂದೇ ಸಮನೆ ಪತ್ರಕರ್ತೆಯರ ಪಾತ್ರಗಳ ಮೊರೆ ಹೋಗಿದ್ದಾರೆ. ಚಿತ್ರದ ನಾಯಕಿ ಪತ್ರಕರ್ತೆ ಆಗಿರುವುದು ಇತ್ತೀಚಿನ ಸಿನಿಮಾಗಳಲ್ಲಿ ಸಾಮಾನ್ಯ ಎಂಬಂತಾಗಿದೆ. ಇದೀಗ ಕರೀನಾ ಕಪೂರ್ ತನ್ನ ಹೊಸ ಚಿತ್ರದಲ್ಲಿ ಪತ್ರಕರ್ತೆಯ ಪಾತ್ರವನ್ನು ಒಪ್ಪಿಕೊಂಡಿದ್ದಾಳೆ. ಪ್ರಕಾಶ್ ಝಾ ನಿರ್ದೇಶನದ 'ಸತ್ಯಾಗ್ರಹ್..' ಎಂಬ ಸಿನಿಮಾದಲ್ಲಿ ತಾನು ನಿರ್ವಹಿಸುತ್ತಿರುವ ಪಾತ್ರಕ್ಕೆ ನಿಜಜೀವನದ ಪತ್ರಕರ್ತರೇ ಸ್ಫೂರ್ತಿ ಎಂಬ ಮಾತನ್ನೂ ಕರೀನಾ ಹೇಳಿದ್ದಾಳೆ.

"ನಿಮ್ಮಷ್ಟು ಕಷ್ಟಪಟ್ಟು ಕೆಲಸ ಮಾಡುವವರು ಯಾರೂ ಇಲ್ಲ. ನಿಮ್ಮ ಕೆಲಸ ಅಷ್ಟು ಸುಲಭ ಅಲ್ಲ. ಇಲ್ಲಿರುವ ಎಲ್ಲ ಪತ್ರಕರ್ತರಿಂದಲೂ ನಾನು ಸ್ಫೂರ್ತಿ ಪಡೆದಿದ್ದೇನೆ. ಕೆಲವು ಸಲ ನಾನೂ ನಿಮ್ಮ ಜತೆ ಸಿಟ್ಟಿನಿಂದ ಮಾತನಾಡಿದ್ದಿದೆ. ಅದು ಸರಿಯಲ್ಲ ಅನ್ನುವುದು ನನಗೆ ಗೊತ್ತಾಗಿದೆ" ಎಂದು ಕರೀನಾ ಸಿನಿಮಾದ ಪತ್ರಿಕಾಗೋಷ್ಠಿಯಲ್ಲಿ ಹೇಳಿದಳಂತೆ.

ಇನ್ನೊಂದೆಡೆ ಅಮೃತಾ ರಾವ್ ಕೂಡಾ 'ಸಿಂಗ್ ಸಾಹೆಬ್ ದಿ ಗ್ರೇಟ್' ಎಂಬ ಚಿತ್ರದಲ್ಲಿ ಪತ್ರಕರ್ತೆಯ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ನರ್ಗಿಸ್ ಫಖ್ರಿ ನಟಿಸುತ್ತಿರುವ 'ಮದ್ರಾಸ್ ಕೆಫೆ' ಚಿತ್ರದಲ್ಲೂ ಆಕೆಯದ್ದು ಪತ್ರಕರ್ತೆಯ ಪಾತ್ರ. ಬಹುಶಃ ಈ ಹಿಂದೆ 'ಪೇಜ್ 3' ಸಿನಿಮಾದಲ್ಲಿ ಕೊಂಕಣಾ ಸೇನ್ ಮತ್ತು 'ನೋ ಒನ್ ಕಿಲ್ಡ್ ಜೆಸ್ಸಿಕಾ' ಚಿತ್ರದಲ್ಲಿ ರಾಣಿ ಮುಖರ್ಜಿ ಪತ್ರಕರ್ತೆಯರ ಪಾತ್ರಗಳನ್ನು ನಿರ್ವಹಿಸಿ ಯಶಸ್ಸು ಕಂಡದ್ದು ಈ ನಟಿಯರಿಗೂ ಸ್ಫೂರ್ತಿ ಆಗಿರಬಹುದು. 'ನಾಕೌಟ್' ಸಿನಿಮಾದಲ್ಲಿ ಕಂಗನಾ ಮತ್ತು 'ರಾಕ್‌ಸ್ಟಾರ್' ಚಿತ್ರದಲ್ಲಿ ಅದಿತಿ ರಾವ್ ಕೂಡಾ ಪತ್ರಕರ್ತೆಯರ ಪಾತ್ರಗಳನ್ನು ನಿರ್ವಹಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

# ಅನೂಷ್ಕಾ ಕಣ್ಣೀರು

ಇತ್ತೀಚೆಗೆ 'ನಾಚ್ ಬಲಿಯೇ' ಟಿವಿ ರಿಯಾಲಿಟಿ ಷೋನಲ್ಲಿ ಅನೂಷ್ಕಾ ಶರ್ಮಾ ಕಣ್ಣೀರು ಹಾಕಿದ್ದು ನೋಡಿ ಜತೆಗಿದ್ದ ಇತರ ಜಡ್ಜ್‌ಗಳು ಬೆರಗಾದರಂತೆ. ಅದರಲ್ಲೂ ಜಡ್ಜ್ ಆಗಿದ್ದ ಶಿಲ್ಪಾ ಶೆಟ್ಟಿ ಮುಂದೆ ಬಂದು ಅನೂಷ್ಕಾಳನ್ನು ಸಮಾಧಾನ ಮಾಡಿದ್ದು ಎಲ್ಲರ ಗಮನ ಸೆಳೆಯಿತು. ಯುವಜನರ ಈ ಡ್ಯಾನ್ಸ್ ಕಾರ್ಯಕ್ರಮದ ನಡುವೆ ಅನೂಷ್ಕಾಳಿಗೆ ಸರ್‌ಪ್ರೈಸ್ ನೀಡಲು ಸಂಘಟಕರು ತೋರಿಸಿದ ಅನೂಷ್ಕಾಳ ಕುಟುಂಬ ಸದಸ್ಯರ ಜತೆಗಿದ್ದ ಫೋಟೋಗಳೇ ಕಣ್ಣೀರು ಉಕ್ಕಲು ಕಾರಣವಂತೆ.

ಸದ್ಯ ಬೆಂಗಳೂರಿನಲ್ಲಿ ವಾಸವಾಗಿರುವ ಅನೂಷ್ಕಾಳ ತಂದೆ ಮಿಲಿಟರಿಯಲ್ಲಿ ಅಧಿಕಾರಿಯಾಗಿದ್ದವರು. ಸೇವೆಯಲ್ಲಿ ಇದ್ದಾಗ ಮಗಳ ಜತೆಗೆ ಹೆಚ್ಚು ಒಡನಾಟ ಸಾಧ್ಯವಾಗಿರಲಿಲ್ಲವಂತೆ. ಹಾಗಾಗಿ ತಂದೆಯ ಜತೆಗಿದ್ದ ಫೋಟೊ ನೋಡಿದೊಡನೆ ಅನೂಷ್ಕಾಗೆ ಕಣ್ಣೀರು ಉಕ್ಕಿ ಬಂತು. ಜತೆಗಿದ್ದ ಇತರ ಜಡ್ಜ್‌ಗಳು ಸಮಾಧಾನ ಮಾಡಿದ ನಂತರ ಅನೂಷ್ಕಾ ಸಮಾಧಾನವಾದಳಂತೆ. ಬಳಿಕ 'ನೀವು ಮದುವೆಯಾಗ ಬಯಸುವ ಹುಡುಗ ಹೇಗಿರಬೇಕು' ಎಂದು ವೇದಿಕೆಯಲ್ಲಿ ನಿರೂಪಕರು ಕೇಳಿದ ಪ್ರಶ್ನೆಗೆ ಅನೂಷ್ಕಾ 'ನಮ್ಮ ಅಪ್ಪನಂತಿರಬೇಕು' ಎಂದದ್ದು ಎಲ್ಲರಲ್ಲೂ ನಗೆ ಉಕ್ಕಿಸಿತು!

■ ಬಿಂದು

